# ಅಸಾಮಾನ್ಯ ಮಾತೆ ಶ್ರೀಮಾತೆ

## ಶ್ರೀಮಾತೆ ಎಂದರೇನು?

ನಾವು ಶ್ರೀಶಾರದಾದೇವಿಯವರನ್ನು ಶ್ರೀಮಾತೆ ಎಂದು ಕರೆಯುತ್ತೇವೆ. ಭಾರತದಲ್ಲಿ ಎಲ್ಲ ಸ್ತ್ರೀಯರನ್ನು 'ಅಮ್ಮ' ಎಂದು ಸಂಬೋಧಿಸುವುದು ರೂಢಿ. ಆದರೆ ಶ್ರೀಶಾರದಾದೇವಿಯವರನ್ನು ಕೇವಲ 'ಅಮ್ಮ' ಎಂದು ಕರೆಯುವುದರಲ್ಲಿ ನಾವು ತೃಪ್ತರಾಗದೆ ಆ ಶಬ್ದದೊಡನೆ 'ಶ್ರೀ' ಎಂಬ ಪದವನ್ನೂ ಸೇರಿಸಿ 'ಶ್ರೀಮಾತೆ' ಎಂದು ಕರೆಯುತ್ತೇವೆ. ಸಾಮಾನ್ಯವಾಗಿ ಶ್ರೀ ಶಬ್ದವನ್ನು ಗೌರವ ಸೂಚಕವಾಗಿ ಉಪಯೋಗಿಸುತ್ತೇವೆ. 'ಗುರು, ಗುರುಸ್ಥಾನ, ದೇವತೆ, ತೀರ್ಥಕ್ಷೇತ್ರ, ಕ್ಷೇತ್ರಾಧಿದೇವತೆ, ಸಿದ್ಧಪುರುಷ, ಸಿದ್ಧಿಗೆ ಅಧಿಕಾರವುಳ್ಳವರು—ಈ ಹೆಸರುಗಳ ಹಿಂದೆ ಶ್ರೀ ಶಬ್ದವನ್ನು ಉಪಯೋಗಿಸಬೇಕು'—ಎಂದು ಒಂದು ಸಂಸ್ಕೃತ ಶ್ಲೋಕ ಹೇಳುತ್ತದೆ:

> **ದೇವಂ ಗುರುಂ ಗುರುಸ್ಥಾನಂ,**
> **ಕ್ಷೇತ್ರಂ ಕ್ಷೇತ್ರಾಧಿದೇವತಾಮ್ ।**
> **ಸಿದ್ಧಂ ಸಿದ್ಧಾಧಿಕಾರಾಂಶ್ಚ**
> **ಶ್ರೀಪೂರ್ವಂ ಸಮುದೀರಯೇತ್ ॥**

ಶಾರದಾದೇವಿಯವರು ಗುರುವೂ ಹೌದು, ದೇವತೆಯೂ ಹೌದು, ತೀರ್ಥಕ್ಷೇತ್ರವೂ ಹೌದು ಮತ್ತು ಸಿದ್ಧಪುರುಷರೂ ಹೌದು. ಈ ಎಲ್ಲ ಅರ್ಥಗಳಲ್ಲಿಯೂ ಅವರನ್ನು 'ಶ್ರೀ' ಎಂದು ಕರೆಯಬಹುದು. ಮತ್ತೆ ಇವೆಲ್ಲಕ್ಕಿಂತ ಹೆಚ್ಚಾಗಿ ಅವರು ಎಲ್ಲರಿಗೂ ತಾಯಿಯಾಗಿದ್ದರು. ಆದ್ದರಿಂದ ಅವರು ಶ್ರೀಮಾತೆ.

> **ಮಾನವನು ಇತರರಲ್ಲಿ ದೋಷವನ್ನು ಕಾಣುವುದು ತನ್ನ ಮನಸ್ಸನ್ನು ಆ ಮಟ್ಟಕ್ಕೆ ಇಳಿಸಿದಾಗಲೇ.**
>
> *ಶ್ರೀ ಶಾರದಾದೇವಿ*

## ಶ್ರೀ ಶಬ್ದದ ವಿಶೇಷಾರ್ಥಗಳು

'ಶ್ರೀ' ಎನ್ನುವ ಶಬ್ದಕ್ಕೆ ಅನೇಕಾರ್ಥಗಳಿವೆ. ಶ್ರೀ ಎಂದರೆ ಸಂಪತ್ತು ಎಂದು. ಶಾರದಾದೇವಿಯವರು ಆಧ್ಯಾತ್ಮಿಕ ಸಂಪದ್ಭರಿತರು; ಹಾಗೂ ಭಕ್ತರಿಗೆ ಆಧ್ಯಾತ್ಮಿಕ ಸಂಪತ್ತನ್ನು ನೀಡುವವರು. ಇನ್ನೊಂದು ಅರ್ಥ ಘನತೆ, ಗೌರವ ಎಂದು. ಶ್ರೀಮಾತೆಯವರು ತಮ್ಮ ನಡೆ ನುಡಿಗಳಲ್ಲಿ ಅತ್ಯಂತ ಗಾಂಭೀರ್ಯವನ್ನು ಹೊರಸೂಸುತ್ತಿದ್ದರು. ಅವರ ಘನತೆಗೆ ಕುಂದುಂಟಾಗುವಂತಹ ಒಂದೇ ಮಾತು ಕೃತಿಯನ್ನೂ ಅವರಲ್ಲಿ ಕಾಣುವುದು ಅಸಾಧ್ಯವಾಗಿತ್ತು. ರಾಮಕೃಷ್ಣರೂ ಕೂಡ ಅವರನ್ನು ಎಷ್ಟೊಂದು ಗೌರವಿಸುತ್ತಿದ್ದರು ಎಂಬುದನ್ನು ನಾವು ಇಲ್ಲಿ ಗಮನಿಸಬಹುದು. ಶ್ರೀ ಎನ್ನುವುದಕ್ಕೆ ಪ್ರಭೆ ಅಥವಾ ತೇಜಸ್ಸು ಎನ್ನುವ ಅರ್ಥವೂ ಇದೆ. ಶಾರದಾದೇವಿಯವರು ಅಪಾರ ತೇಜಸ್ಸುಳ್ಳವರು. ಕಠೋರ ತಪಸ್ಸನ್ನಾಚರಿಸಿ ಅವರು ಆ ತೇಜಸ್ಸನ್ನು ಪಡೆದಿದ್ದರು. ಆ ತೇಜಃಪ್ರಭಾವಕ್ಕೆ ಒಳಗಾಗಿಯೇ ಶ್ರೀರಾಮಕೃಷ್ಣರ ಶಿಷ್ಯರೆಲ್ಲರೂ ಅವರನ್ನು ಆರಾಧಿಸಿದರು. ಸ್ವಾಮಿ ವಿವೇಕಾನಂದರೂ ಕೂಡ ಅವರೆಡೆಗೆ ಅತ್ಯಂತ ಭಯಭಕ್ತಿಯಿಂದ ಹೋಗುತ್ತಿದ್ದರು, ದೀರ್ಘದಂಡ ಪ್ರಣಾಮ ಮಾಡುತ್ತಿದ್ದರು. ಒಮ್ಮೆ ಅವರು ಶಾರದಾದೇವಿಯವರನ್ನು ನೋಡಲು ದೋಣಿಯಲ್ಲಿ ಹೋಗುವಾಗ ಗಂಗಾನದಿಯ ನೀರನ್ನು ತಮ್ಮ ಮೇಲೆ ಮತ್ತೆ ಮತ್ತೆ ಚಿಮುಕಿಸಿಕೊಳ್ಳುತ್ತಿದ್ದರಂತೆ. ತೇಜಸ್ವೀ ವ್ಯಕ್ತಿಗಳನ್ನು ನೋಡಲು ಹೋಗುವಾಗ ಪರಮ ಪವಿತ್ರ ಭಾವದಿಂದ ಹೋಗಬೇಕಲ್ಲವೆ?

ಮಂಗಳಕರವಾದುದು ಎಂಬ ಅರ್ಥವೂ ಶ್ರೀ ಶಬ್ದಕ್ಕೆ ಇದೆ. ಶ್ರೀಮಾತೆಯವರ ಜೀವನ ಮಂಗಳ, ಅವರ ಉಪದೇಶಗಳು ಮಂಗಳದಾಯಕ, ಅವರ ಸಾನ್ನಿಧ್ಯ ಮಂಗಳಪ್ರದ, ಅವರ ಚಿಂತನೆ ಮಂಗಳಮಯ. ಮಂಗಳವೆಂದರೆ ಪವಿತ್ರವಾದುದು ಎಂದೂ ಅರ್ಥವಾಗುತ್ತದೆ. ಶ್ರೀಮಾತೆಯವರು ಪವಿತ್ರತಾ ಸ್ವರೂಪಿಣಿಯಾಗಿದ್ದರು. ಆ ಪವಿತ್ರತೆ ಇತರರನ್ನೂ ಪವಿತ್ರಗೊಳಿಸುತ್ತಿತ್ತು. ಅವರ ನಾದಿನಿಯಾದ ನಳಿನಿಯು ಎಲ್ಲೋ ಹೊರಗೆ ಹೋಗಿ ಮನೆಗೆ ಬಂದಾಗ ಏನೊ ಹೇಸಿಗೆಯನ್ನು ತುಳಿದು ಬಂದಿದ್ದಳು. ಸಂಪ್ರದಾಯದ ಪ್ರಕಾರ ಆಕೆ ಸ್ನಾನ ಮಾಡಬೇಕಿತ್ತು. ಆಗ ಚಳಿಗಾಲ. ಅವೇಳೆಯಲ್ಲಿ ಸ್ನಾನ ಮಾಡಿದರೆ ನೆಗಡಿಯಾಗಬಹುದೆಂದು ಶ್ರೀಮಾತೆಯವರು 'ನನ್ನನ್ನು ಮುಟ್ಟು, ಸಾಕು' ಎನ್ನುತ್ತಾರೆ. ತಮ್ಮ ಪವಿತ್ರತೆಯ ವಿಷಯದಲ್ಲಿ ಅವರಿಗೆ ಅಷ್ಟೊಂದು ಭರವಸೆ ಇತ್ತು. ಬುದ್ಧಿ ಅಥವಾ ತಿಳಿವಳಿಕೆಯನ್ನು ಶ್ರೀ ಎಂದು ಕರೆಯುತ್ತಾರೆ. ಶ್ರೀಮಾತೆಯವರು ಬುದ್ಧಿಶಕ್ತಿಯಲ್ಲಿ ಶ್ರೀರಾಮಕೃಷ್ಣರಿಂದಲೇ ಸೈ ಎನಿಸಿಕೊಂಡವರು. ಸದ್ಗುಣಗಳು ಎಂಬ ಅರ್ಥದಲ್ಲಿಯೂ ಶ್ರೀ ಶಬ್ದವು ಶಾರದಾದೇವಿಯವರಿಗೆ ಸಂಪೂರ್ಣ ಅನ್ವಯವಾಗುತ್ತದೆ.

## ಕ್ಷಮೆಯೇ ತಪಸ್ಸು

ಶ್ರೀಮಾತೆಯವರು ಸಂಪೂರ್ಣ ದೋಷಮುಕ್ತರಾಗಿದ್ದರು. ಇದರಿಂದಾಗಿಯೆ ಅವರಿಗೆ ಇತರರ ದೋಷವನ್ನು ನೋಡಲಾಗುತ್ತಿರಲಿಲ್ಲ. ಆದರೂ ತಾವು ದೋಷಮುಕ್ತರೆಂಬ ಅಹಂಭಾವವಿರಲಿಲ್ಲ. ಏಕೆಂದರೆ ಅಂತಹ ಅಹಂಭಾವವೇ ಒಂದು ದೋಷ. ಅದಕ್ಕಾಗಿಯೇ ಅವರು ಹೇಳಿದರು : 'ನಿನಗೆ ಮನಶ್ಶಾಂತಿ ಬೇಕಾದರೆ ಇತರರ ದೋಷಗಳನ್ನು ನೋಡಬೇಡ. ಅದರ ಬದಲು ನಿನ್ನ ದೋಷಗಳನ್ನೇ ನೋಡು.'

ನಾವು ಸಾಮಾನ್ಯವಾಗಿ ನಮ್ಮಲ್ಲಿರುವ ಒಳ್ಳೆಯದನ್ನು ನೋಡುವುದಕ್ಕಿಂತ ಇತರರಲ್ಲಿರುವ ದೋಷವನ್ನು ನೋಡುವುದರಲ್ಲಿ ಉತ್ಸುಕರಾಗಿರುತ್ತೇವೆ; ನಮ್ಮ ಹಿತವನ್ನು ಸಾಧಿಸುವುದಕ್ಕಿಂತ ಇತರರಿಗೆ

ಅಹಿತವನ್ನು ಉಂಟುಮಾಡುವುದರಲ್ಲಿ ಶ್ರಮಿಸುತ್ತೇವೆ. ನಮ್ಮಲ್ಲೇ ನಾವು ಅತೃಪ್ತರಾದಾಗ ಇತರರ ದೋಷವನ್ನು ಅರಸಲು ಪ್ರಯತ್ನಿಸುತ್ತೇವೆ. ನಮ್ಮಲ್ಲಿ ಯಾವುದೊ ಒಂದು ದೋಷವಿದ್ದು, ಅದು ಯಾವುದೇ ರೀತಿಯಲ್ಲಿ ನಮ್ಮನ್ನು ಕಾಡುತ್ತಿದ್ದರೆ, ಅದೇ ದೋಷವನ್ನು ಇತರರಲ್ಲಿ ನೋಡಿದಾಗ ನಮಗೆ ಅಸಹನೀಯವಾಗುತ್ತದೆ. ಹೀಗೆ ಇತರರ ದೋಷ ಅಸಹನೀಯವಾದಾಗ ನಮ್ಮ ಕಡೆಗೇ ನಾವು ಗಮನ ಹರಿಸಬೇಕು. ಆಗ ನಮ್ಮ ದೋಷದ ಅರಿವಾಗಿ ಇತರರ ದೋಷವನ್ನು ಹೃತ್ಪೂರ್ವಕವಾಗಿ ಮನ್ನಿಸಲು ಸಾಧ್ಯವಾಗುತ್ತದೆ. ನಮ್ಮ ದೋಷವನ್ನು ನಾವು ಹೇಗೆ ಕ್ಷಮಿಸಿಕೊಳ್ಳುತ್ತೇವೆಯೊ ಹಾಗೆಯೇ ಇತರರ ದೋಷವನ್ನೂ ಕ್ಷಮಿಸಬೇಕು.

ಆದ್ದರಿಂದಲೇ ಶ್ರೀಮಾತೆಯವರು 'ಕ್ಷಮೆಯೇ ತಪಸ್ಸು' ಎನ್ನುತ್ತಾರೆ. ವ್ಯಕ್ತಿಯು ತನ್ನ ಬಗ್ಗೆ ಆರೋಗ್ಯಕರ ಮನೋಭಾವವುಳ್ಳವನಾಗಿದ್ದರೆ ಇತರರ ದೋಷವನ್ನು ಅರಸುವ ಗೋಜಿಗೆ ಹೋಗುವುದಿಲ್ಲ. ಆದ್ದರಿಂದ ನಮ್ಮನ್ನು ನಾವು ಮೊದಲು ಸರಿಪಡಿಸಿಕೊಳ್ಳಬೇಕು. ನಮ್ಮಲ್ಲಿ ಶಾಂತಿಯಿದ್ದರೆ ಇತರರಿಗೂ ಶಾಂತಿಯನ್ನು ನೀಡಬಹುದು, ನಾವು ಆನಂದದಿಂದಿದ್ದರೆ ಇತರರನ್ನೂ ಆನಂದಪಡಿಸಬಹುದು. '**ಒಬ್ಬನು ಇತರರಿಗೆ ಆನಂದವನ್ನು ನೀಡಬಲ್ಲನಾದರೆ ಆಗ ಅವನ ಜೀವನದ ಉದ್ದೇಶ ಸಫಲವಾದಂತಾಗುತ್ತದೆ**' ಎಂದು ಹೇಳುತ್ತಾರೆ ಶ್ರೀಮಾತೆಯವರು.



**ನನ್ನ ಕರುಣೆಯನ್ನು ಪಡೆಯದವನು ನಿಜಕ್ಕೂ ದುರದೃಷ್ಟವಂತ. ನಾನು ಕರುಣೆ ತೋರದ ಯಾವ ವ್ಯಕ್ತಿಯೂ, ಅಷ್ಟೇಕೆ, ಒಂದು ಕೀಟವೂ ಇಲ್ಲ.**

## ವಿಶ್ವವ್ಯಾಪಿ ಮಾತೃತ್ವದ ಪರಿಧಿ

ಶ್ರೀಮಾತೆಯವರು ಹೇಳುತ್ತಾರೆ: '**ಇಡೀ ಜಗತ್ತನ್ನು ನಿನ್ನದಾಗಿಸುವುದನ್ನು ಕಲಿ. ಯಾರೂ ಪರರಲ್ಲ, ಜಗತ್ತಿನ ಎಲ್ಲರೂ ನಿನ್ನವರೆ.**' ಅಂದರೆ ಜಗತ್ತಿನ ಎಲ್ಲರೊಡನೆ ಒಂದು ಸಂಬಂಧವನ್ನು ಇಟ್ಟುಕೊಳ್ಳಬೇಕು. ಈ ಸಂಬಂಧ ನಮ್ಮ ವ್ಯಕ್ತಿತ್ವದ ಸ್ವರೂಪವನ್ನು ಅವಲಂಬಿಸಿರುತ್ತದೆ. ಒಬ್ಬ ರಾಜಕಾರಣಿಯು ರಾಜಕೀಯವಾದ ವ್ಯಕ್ತಿತ್ವವನ್ನು ಪಡೆದಿರುತ್ತಾನೆ. ಇತರರೊಡನೆ ಅವನ ಸಂಬಂಧವೂ ರಾಜಕೀಯವಾಗಿರುತ್ತದೆ. ಅವನು ಎಲ್ಲವನ್ನೂ ರಾಜಕೀಯ ದೃಷ್ಟಿಯಿಂದಲೇ ನೋಡುತ್ತಾನೆ. ಹಾಗೆಯೇ ಒಬ್ಬ ವ್ಯಾಪಾರಿಯು ವ್ಯಾಪಾರೀ ವ್ಯಕ್ತಿತ್ವವನ್ನು ಪಡೆದಿರುತ್ತಾನೆ ಮತ್ತು ಅದಕ್ಕನುಗುಣವಾಗಿ ಇತರರೊಡನೆ ಅವನ ಸಂಬಂಧವಿರುತ್ತದೆ. ಇದೇ ಮಾತು ಸಾಮಾನ್ಯವಾಗಿ ಎಲ್ಲ ಕ್ಷೇತ್ರಕ್ಕೂ ಅನ್ವಯಿಸುತ್ತದೆ. ಆದರೆ ಆಯಾಯ ಕ್ಷೇತ್ರದಲ್ಲಿರುವವರೆಲ್ಲರೂ ಅದೇ ರೀತಿಯ ವ್ಯಕ್ತಿತ್ವವನ್ನು ಪಡೆದಿರಬೇಕೆಂಬ ನಿಯಮವೇನೂ ಇಲ್ಲ. ಅವರವರ ವ್ಯಕ್ತಿತ್ವದ ಸ್ವರೂಪ ಅವರವರ ಪ್ರಧಾನ ಜೀವನಾದರ್ಶವನ್ನು ಅವಲಂಬಿಸಿರುತ್ತದೆ.

ಶ್ರೀಮಾತೆಯವರು ತಮ್ಮದೇ ಆದ ವ್ಯಕ್ತಿತ್ವವನ್ನು ಬೆಳೆಸಿಕೊಂಡರು. ಅವರ ವ್ಯಕ್ತಿತ್ವದ ಪ್ರಧಾನ ಕೇಂದ್ರಬಿಂದುವೇ ಮಾತೃಭಾವ. ಈ ಮಾತೃಭಾವವನ್ನು ಕೇಂದ್ರವಾಗಿಟ್ಟುಕೊಂಡು ಜಗತ್ತಿನ ಎಲ್ಲರನ್ನೂ ತಮ್ಮ ಮಕ್ಕಳೆಂದು ಪರಿಗಣಿಸಿದರು, ಮಾತೃತ್ವದ ಪರಿಧಿಯೊಳಗೆ ಎಲ್ಲರನ್ನೂ ಸೇರಿಸಿದರು. ಯಾರನ್ನೂ ಅವರು ಹೊರಗಿಡಲಿಲ್ಲ. ಅವರು ಹೇಳುತ್ತಿದ್ದರು, '**ನಾನು ಸಜ್ಜನರ ತಾಯಿಯೂ ಹೌದು, ದುರ್ಜನರ ತಾಯಿಯೂ ಹೌದು. ನೀನು ಸಂಕಟದಲ್ಲಿರುವಾಗಲೆಲ್ಲ ನಿನ್ನಷ್ಟಕ್ಕೆ ನೀನು ಹೇಳಿಕೊ, "ನನಗೊಬ್ಬಳು ತಾಯಿಯಿರುವಳು"** ಎಂದು.' ಇಷ್ಟರಮಟ್ಟಿಗೆ ಶ್ರೀಮಾತೆಯವರು ತಮ್ಮನ್ನು ಮಾತೃಭಾವದೊಡನೆ ಒಂದಾಗಿಸಿಕೊಂಡಿದ್ದರು. ಅವರಿಗದು ಎಷ್ಟೊಂದು ಸಹಜವಾಗಿತ್ತೆಂದರೆ ಅವರೆಡೆಗೆ ಬಂದವರೆಲ್ಲ ಅವರನ್ನು ತಮ್ಮ ಸ್ವಂತ ತಾಯಿಯೆಂದೇ ತಿಳಿಯುತ್ತಿದ್ದರು.

## ಸಾಮಾನ್ಯ ಮಾತೆಗೂ ಶ್ರೀಮಾತೆಗೂ ವ್ಯತ್ಯಾಸ

ಸಾಮಾನ್ಯವಾಗಿ ತಾಯಿ-ಮಕ್ಕಳ ಸಂಬಂಧ ಜೈವಿಕವಾದುದು. ತಾಯಿ ತನ್ನ ಮಕ್ಕಳನ್ನು ಪ್ರೀತಿಸುವುದು, ಆ ಮಕ್ಕಳು ತನ್ನ ದೇಹದ ಒಂದು ಅಂಶವಾಗಿರುವುದರಿಂದ, ಆಕೆ ತನ್ನ ದೇಹವನ್ನು ಪ್ರೀತಿಸುವಂತೆಯೇ ಮಕ್ಕಳನ್ನೂ ಪ್ರೀತಿಸುತ್ತಾಳೆ. ಆದ್ದರಿಂದಲೇ ಆಕೆ ಮಕ್ಕಳು ಆರೋಗ್ಯವಂತರಾಗಿರಬೇಕು, ದಷ್ಟಪುಷ್ಟವಾಗಿರಬೇಕು, ಅವರು ಚೆನ್ನಾಗಿ ತಿನ್ನಬೇಕು ಎಂದು ಬಯಸುತ್ತಾಳೆ. ಅಷ್ಟೇ ಅಲ್ಲದೆ ಅವರು ತನ್ನಂತೆಯೇ ಮದುವೆ ಮಾಡಿಕೊಂಡು ಸಂಸಾರ ನಡೆಸಬೇಕೆಂದೂ ಬಯಸುತ್ತಾಳೆ. ಅವರು ಸಮಾಜದಲ್ಲಿ ಒಳ್ಳೆಯ ಸ್ಥಾನದಲ್ಲಿರಬೇಕೆಂದು ಆಶಿಸುತ್ತಾಳೆ.

ಆದರೆ ಶ್ರೀಮಾತೆಯವರ ಸಂಬಂಧ ಜೈವಿಕವಾದುದಲ್ಲ. ಆದ್ದರಿಂದ ಅವರು ತಮ್ಮ ಮಕ್ಕಳ ಭೌತಿಕ ಉನ್ನತಿಯನ್ನು ಮಾತ್ರ ಬಯಸದೆ ಅವರ ನೈತಿಕ ಮತ್ತು ಆಧ್ಯಾತ್ಮಿಕ ಉನ್ನತಿಯನ್ನೂ ಬಯಸಿದರು. ಮಕ್ಕಳಿಗೆ ಉಣಬಡಿಸುವುದೆಂದರೆ ಅವರಿಗೆ ಪ್ರೀತಿ. ಆದರೆ ಆ ಮಕ್ಕಳು ಕೇವಲ ದೇಹಸೌಷ್ಠವದಿಂದ ಕೂಡಿರಬೇಕೆಂದು ಬಯಸಲಿಲ್ಲ. ಅವರಿಗೆ ಅತಿಯಾಗಿ ತಿನ್ನಿಸಿ ಅವರನ್ನು ಬೊಜ್ಜು ದೇಹಿಗಳನ್ನಾಗಿಸುವುದು ಅವರಿಗೆ ಇಷ್ಟವಿರಲಿಲ್ಲ. ಗೋಪೇಶ ಎಂಬ ಹುಡುಗನಿಗೆ ಅವರು ಸಿಹಿ ತಿಂಡಿಯನ್ನು ನೀಡುತ್ತಿರಲಿಲ್ಲವಂತೆ. ಯಾರೊ ಅದಕ್ಕೆ ಕಾರಣ ಕೇಳಿದಾಗ, 'ಅವನು ಸಾಧುವಾಗುತ್ತಾನೆ' ಎಂದು ಶ್ರೀಮಾತೆಯವರು ಉತ್ತರಿಸಿದರು. ಮುಂದೆ ಗೋಪೇಶ

ಸ್ವಾಮಿ ಶಾರದೇಶಾನಂದ ಎಂದು ಪ್ರಸಿದ್ಧ ಸಂನ್ಯಾಸಿಗಳಾದರು.

ಅವರು ಯಾವಾಗಲೂ ತಮ್ಮ ಮಕ್ಕಳನ್ನು ವಿವಾಹ ಬಂಧನದಲ್ಲಿ ಸಿಲುಕಿಸಲು ಪ್ರಯತ್ನಿಸಲಿಲ್ಲ. ತಮ್ಮ ಬಳಿಗೆ ಬರುತ್ತಿದ್ದ ಎಷ್ಟೋ ಯುವಕರನ್ನು ಸಂನ್ಯಾಸಜೀವನಕ್ಕೆ ಉತ್ತೇಜಿಸುತ್ತಿದ್ದರು. ಅಷ್ಟೇ ಅಲ್ಲದೆ ತಾವೇ ಸ್ವತಃ ಕೆಲವರಿಗೆ ಸಂನ್ಯಾಸವನ್ನೂ ನೀಡಿರುವರು. ಒಮ್ಮೆ ಅವರ ಕುಟುಂಬಕ್ಕೆ ಸೇರಿದವರೊಬ್ಬರು 'ನೀವು ಹೀಗೆ ನಿಮ್ಮ ಬಳಿಗೆ ಬರುವ ಹುಡುಗರಿಗೆ ವೈರಾಗ್ಯವನ್ನು ಬೋಧಿಸುತ್ತಿದ್ದರೆ ಮಹಾಮಾಯೆ ನಿಮ್ಮ ಮೇಲೆ ಕೋಪಮಾಡಿಕೊಳ್ಳುತ್ತಾಳೆ' ಎಂದು ಶ್ರೀಮಾತೆಯವರಿಗೆ ಹೇಳಿದಾಗ ಅವರಂದರು : 'ಅವರೆಲ್ಲ ದೇವಶಿಶುಗಳು, ಸಂಸಾರದಲ್ಲಿ ಹೂವಿನಂತೆ ಪವಿತ್ರವಾಗಿ ಇರುತ್ತಾರೆ. ಇದಕ್ಕಿಂತ ಸುಖವಾದುದು ಇನ್ನಾವುದಿದೆ ಹೇಳು? ಸಂಸಾರದಲ್ಲಿ ಎಂಥ ಸುಖವಿದೆ ಎಂಬುದು ನಿನಗೆ ಗೊತ್ತು. ನಿಮ್ಮ ಸಂಸಾರದ ಬೇಗೆಯಲ್ಲಿ ನನ್ನ ಎಲುಬೂ ಬೆಂದುಹೋಗುತ್ತಿದೆ.'

**ಮಗು, ನಿಮ್ಮಲ್ಲಿ ಯಾರಿಗಾದರೂ ಒಂದು ಸಣ್ಣ ಮುಳ್ಳು ಚುಚ್ಚಿದರೂ ಸಾಕು, ನನ್ನ ಎದೆಗೆ ಕತ್ತಿಯಿಂದ ತಿವಿದಂತಾಗುತ್ತದೆ.**

## ಮೋಹರಹಿತ ವಾತ್ಸಲ್ಯ

ಸಾಮಾನ್ಯ ತಾಯಿಯರಲ್ಲಿ ಮಕ್ಕಳ ಮೇಲೆ ವ್ಯಾಮೋಹವಿರುತ್ತದೆ. ಮಕ್ಕಳು ತಮ್ಮವರಾಗಿರಬೇಕೆಂಬ ಒಡೆತನದ ಭಾವವಿರುತ್ತದೆ. ಇದರಿಂದಾಗಿ ಅವರು ತಮ್ಮ ಮಕ್ಕಳಿಗೆ ಸ್ವತಂತ್ರವಾಗಿ ಬೆಳೆಯಲು ಅವಕಾಶ ಕೊಡದೆ ತಮ್ಮ ಇಚ್ಛೆಗೆ ಅನುಗುಣವಾಗಿ ತಮ್ಮ ಆದರ್ಶಕ್ಕೆ ಅನುಗುಣವಾಗಿ ಅವರು ಬೆಳೆಯಬೇಕೆಂದು ಬಯಸುತ್ತಾರೆ. ಈ ಪ್ರವೃತ್ತಿ ಶ್ರೀಮಾತೆಯವರಲ್ಲಿ ಕಂಡುಬರುವುದಿಲ್ಲ. ಅವರು ತಮ್ಮ ಮಕ್ಕಳು ಅವರವರ ಯೋಗ್ಯತೆಗೆ, ಅವರವರ ವಿಕಾಸದ ಹಂತಕ್ಕೆ ಅನುಗುಣವಾಗಿ ಬೆಳೆಯಲು ಅವಕಾಶವೀಯುತ್ತಿದ್ದರು. ಕೆಲವರಿಗೆ ಅವರು ಮದುವೆಯಾಗಿ ಸಂಸಾರವನ್ನು ನಡೆಸಲು ಹೇಳುತ್ತಿದ್ದರು, ಮತ್ತೆ ಕೆಲವರಿಗೆ ಸಂನ್ಯಾಸಕ್ಕೆ ಉತ್ತೇಜನ ನೀಡುತ್ತಿದ್ದರು. ಒಬ್ಬ ವ್ಯಕ್ತಿಯು ಬಂದು, 'ತಾಯಿ, ನಾನು ಮದುವೆಯಾಗುವುದಿಲ್ಲ' ಎಂದು ಹೇಳಿದಾಗ ಅವರಂದರು, 'ಅದು ಹೇಗೆ? ಸಂಸಾರದಲ್ಲಿ ಎಲ್ಲವೂ ಜತೆ-ಜತೆಯಾಗಿಯೇ ಇವೆ. ನೋಡು, ಎರಡು ಕಣ್ಣು, ಎರಡು ಕಿವಿ, ಎರಡು ಕೈ—ಹೀಗೆ ಎಲ್ಲ ಎರಡೆರಡಾಗಿವೆ. ಹಾಗೆಯೇ ಗಂಡ-ಹೆಂಡಿರು'ಎಂದು. ಆ ವ್ಯಕ್ತಿ ಅನಂತರ ಮದುವೆಯಾದ.

ಸಾಮಾನ್ಯ ತಾಯಿಯು ಮಕ್ಕಳ ದೈಹಿಕರೂಪವನ್ನು ಪರಿಗಣಿಸುವುದೇ ಇಲ್ಲ. ಮಕ್ಕಳು ಎಷ್ಟೇ ಕುರೂಪಿಯಾದರೂ ಪ್ರೀತಿಸುತ್ತಾಳೆ. ಇದರಿಂದಾಗಿಯೇ, 'ಹೆತ್ತ ತಾಯಿಗೆ ಹೆಗ್ಗಣ ಮುದ್ದು' ಎಂಬ ಗಾದೆ ಪ್ರಚಲಿತವಿದೆ. ಮಕ್ಕಳು ಎಷ್ಟೇ ಗಲೀಜು ಮಾಡಿಕೊಂಡರೂ ಅವಳು ಅವರನ್ನು ತಿರಸ್ಕರಿಸುವುದಿಲ್ಲ. ಆದರೆ ಆಕೆಯ ಶಕ್ತಿ ಸೀಮಿತವಾದುದು. ದೈಹಿಕವಾಗಿ ಮಾತ್ರ ಮಕ್ಕಳನ್ನು ಶುದ್ಧಿಗೊಳಿಸಿ ಸ್ವೀಕರಿಸಬಲ್ಲಳು. ಮಾನಸಿಕ ಹಂತದಲ್ಲಿ ಮಕ್ಕಳನ್ನು ಸರಿಪಡಿಸುವ ಶಕ್ತಿ ಆಕೆಯಲ್ಲಿ ಸೀಮಿತವಾಗಿರುತ್ತದೆ. ಆದರೆ ಈ ವಿಷಯದಲ್ಲಿ ಶ್ರೀಮಾತೆಯವರ ಶಕ್ತಿ ಅಪಾರವಾದುದು.

ಸಾಮಾನ್ಯವಾಗಿ ಗುರುವು ಶಿಷ್ಯನನ್ನು ಸ್ವೀಕರಿಸುವಾಗ ಅವನನ್ನು ಹಲವಾರು ರೀತಿಯಲ್ಲಿ ಪರೀಕ್ಷಿಸುತ್ತಾನೆ, ಅವನ ಅರ್ಹತೆಯನ್ನು ಅಳೆಯುತ್ತಾನೆ, ಅವನು ಪರಿಶುದ್ಧನಾಗಿದ್ದರೆ ಮಾತ್ರ ಸ್ವೀಕರಿಸುತ್ತಾನೆ. ಆದರೆ ಶ್ರೀಮಾತೆಯವರು ಕೇವಲ ಗುರುವಾಗಿರುವುದು ಮಾತ್ರವಲ್ಲದೆ ತಾಯಿಯೂ ಆಗಿದ್ದರು. ಅವರು ಎಲ್ಲರಿಗೂ ಹೆತ್ತ ತಾಯಿಯಂತಿದ್ದರು. ತಮ್ಮಿಂದ ಸೇವೆ ಮಾಡಿಸಿಕೊಳ್ಳಲು ಸಂಕೋಚ ಪಡುತ್ತಿದ್ದ ಭಕ್ತರಿಗೆ ಶ್ರೀಮಾತೆ ಹೇಳುತ್ತಾರೆ 'ನಾನು ನಿಮಗೆ ಏನು ತಾನೆ ಮಾಡಿದ್ದೇನಪ್ಪ? ನಾನು ನಿನ್ನ ತಾಯಿಯಲ್ಲವೇ? ಮಗುವನ್ನು ನೋಡಿಕೊಳ್ಳುವುದು, ತನ್ನ ಕೈಯಿಂದಲೇ ಅದನ್ನು ಸ್ವಚ್ಛ ಮಾಡುವುದು ತಾಯಿಯ ಪುಣ್ಯವಲ್ಲವೇ?' ಆದ್ದರಿಂದ ಎಂತಹ ಪಾಪಕೃತ್ಯವನ್ನು ಎಸಗಿದವರು ಅವರ ಬಳಿಗೆ ಹೋದರೂ ಅವರ ಮಾತೃ ವಾತ್ಸಲ್ಯದ ಮಡಿಲಲ್ಲಿ ಅವರಿಗೆ ಆಶ್ರಯ ದೊರೆಯುತ್ತಿತ್ತು. ಮಗು ತಾಯಿಯೆಡೆಗೆ ಹೋದಾಗ ಹೇಗೆ ನಿರ್ಭಯತೆಯನ್ನು ಪಡೆಯುವುದೊ ಹಾಗೆಯೇ ಶ್ರೀಮಾತೆಯವರ ಆಶ್ರಯದಲ್ಲಿ ಎಲ್ಲರೂ ನಿರ್ಭಯರಾಗಿರಬಹುದು. ಅವರ ಆಶ್ವಾಸನೆಯ ನುಡಿಗಳಿವು:

**ನನ್ನ ಮಗು ಕೊಳೆ ಮಾಡಿಕೊಂಡರೆ ಅದನ್ನು ತೊಳೆದು ತೊಡೆಯ ಮೇಲೆ ಕರೆದುಕೊಳ್ಳುವುದು ತಾಯಿಯಾದ ನನ್ನ ಕರ್ತವ್ಯವಲ್ಲವೇ?**

'ನನ್ನನ್ನಾಶ್ರಯಿಸಿದವರಿಗೆ ಮುಕ್ತಿ ಕಟ್ಟಿಟ್ಟ ಬುತ್ತಿ. ನನ್ನ ಮಕ್ಕಳನ್ನು ನರಕಕ್ಕೆ ಕಳಿಸುವ ಎದೆಗಾರಿಕೆ ಯಾವ ವಿಧಿಗೂ ಇಲ್ಲ. ನಿನ್ನ ಭವಿಷ್ಯವನ್ನು ನನ್ನ ಮೇಲೆ ಹೊರಿಸಿ ನಿಶ್ಚಿಂತನಾಗಿರು. ಈ ಒಂದು ವಿಷಯವನ್ನು ಯಾವಾಗಲೂ ನೆನಪಿಡು— ಸರಿಯಾದ ಸಮಯಕ್ಕೆ ನಿನ್ನ ಸಹಾಯಕ್ಕೆ ಬಂದು ನಿನ್ನನ್ನು ಪರಂಧಾಮಕ್ಕೆ ಒಯ್ಯುವವರು ನಿನ್ನ ಹಿಂದಿರುವರು ಎಂದು.'

## ಸಾಮಾನ್ಯತೆಯಲ್ಲಿ ಅಸಾಮಾನ್ಯತೆ

ಇಂತಹ ಅಪಾರ ಶಕ್ತಿಶಾಲಿನಿಯಾದರೂ ಶ್ರೀಮಾತೆಯವರು ಎಂತಹ ನಿರಾಡಂಬರವಾದ ಸಾಮಾನ್ಯ ಜೀವನ ನಡೆಸಿದರು! ಸ್ವಾಮಿ ಪ್ರೇಮಾನಂದರು ಅವರ ಬಗ್ಗೆ ಹೀಗೆ ಹೇಳುತ್ತಾರೆ : 'ಇಡೀ ಜಗನ್ನಾಟಕ ಸೂತ್ರಧಾರಿಣಿಯಾದ ಜಗನ್ಮಾತೆ ಒಬ್ಬ ಸಾಮಾನ್ಯ ಬಡ ಹೆಂಗಸಿನ ರೂಪದಲ್ಲಿ ಬಂದು ನೆಲಕ್ಕೆ ಸಗಣಿ ಸಾರಿಸುವುದು, ಪಾತ್ರೆ ತಿಕ್ಕುವುದು, ಬತ್ತ ಕುಟ್ಟುವುದು, ಭಕ್ತರ ಎಂಜಲೆಲೆ ತೆಗೆಯುವುದು—ಈ ಬಗೆಯ ಕೆಲಸಕಾರ್ಯಗಳನ್ನೆಲ್ಲ ಮಾಡುತ್ತಿರುವುದನ್ನು ನೀವೆಲ್ಲ ನೋಡಿಯೇ ಇದ್ದೀರಿ. ಅವರು ಪರಿಶ್ರಮ ಪಡುತ್ತಿರುವುದು ಗೃಹಸ್ಥರಿಗೆ ಅವರ ಗೃಹಸ್ಥಧರ್ಮವನ್ನು ಕಲಿಸಿಕೊಡುವುದಕ್ಕಾಗಿ. ಎಂತಹ ಅಪರಿಮಿತ ಸಹನೆ! ಅಪಾರ ಕರುಣೆ! ಎಂಥ ನಿರಭಿಮಾನ!'

ಈ ಸಾಮಾನ್ಯತೆಯಲ್ಲಿಯೆ ಶಾರದಾದೇವಿಯವರ ಅಸಾಮಾನ್ಯತೆ ಇದೆ. ಈ ಅಸಾಮಾನ್ಯತೆಯಿಂದಾಗಿಯೇ ಅವರು ಕೇವಲ ಮಾತೆಯಲ್ಲ, 'ಶ್ರೀಮಾತೆ.'